ದಿನಾಂಕ 17-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರಃ ಶ್ರೀ. ಯು.ಎಸ್.ಎನ್. ವಕೀಲರಿಂದಃ**

ಅಪಘಾತ ಸಮಯದಲ್ಲಿ ನಾನು ಈಶ್ವರ ಮಂಗಲದಿಂದಪುತ್ತೂರಿಗೆ ಬರುತ್ತಿದ್ದೆ. ಅಪಘಾತ ಪಡಿಸಿದ ಕಾರು ಪುತ್ತೂರಿನಿಂದ ಮೈಸೂರು ಕಡೆ ಹೋಗುತ್ತಿತ್ತು. ಪುತ್ತೂರರಿನಿಂದ ಮೈಸೂರು ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಅಪಘಾತ ಆಗಿದೆ. ನಾನು ರಸ್ತೆಯ ಎಡ ಅಂಚಿನಿಂದ 2 ಅಡಿ ಬಲಕ್ಕೆ ಇದ್ದು ನಾನು ಇದ್ದ ಜಾಗದಿಂದ 20 ಅಡಿ ಬಲಕ್ಕೆ ರಸ್ತೆ ಉಳಿಕೆ ಇತ್ತು. ಅಪಘಾತ ಸಂಪೂರ್ಣ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಕಾರು ಚಾಲಕನ ತಪ್ಪು ಅಪಘಾತದಲ್ಲಿ ಇಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ನಾನು ಕೂಡಾ ಕಾರಣ ಎಂದರೆ ಸರಿಯಲ್ಲ.

ಅಪಘಾತ ಆದ ನಂತರ ಪ್ರಥಮವಾಗಿ ನನ್ನನ್ನು ಪುತ್ತೂರಿನ ಸಿಟಿ ಆಸ್ಪತ್ರೆಗೆ ನಂತರ ಪುತ್ತೂರಿನ ಸರ್ಕಾರಿ ಆಸ್ಪತ್ರೆಗೆ ಆದಾದ ನಂತರ ಮಂಗಳೂರಿನ ಫಸ್ಟ್ ನ್ಯೂರೋ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಗಿದೆ. ಅಪಘಾತ ಹೇಗೆ ಆಯಿತು ಅನ್ನುವುದರಿಂದ ಇಲ್ಲಿಯವರೆಗೆ ಏನೆಲ್ಲಾ ಚಿಕಿತ್ಸೆ ಪಡೆದಿದ್ದೇನೆ ಎನ್ನುವ ಬಗ್ಗೆ ಯೋಚನೆ ಮಾಡಿ ಹೇಳಬಲ್ಲೆ. ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಆದಾಗ ನನ್ನ ತಲೆಯ ಮೇಲೆ ಹೆಲ್ಮೆಟ್ ಇತ್ತು . ಅಪಘಾತ ಸಮಯದಲ್ಲಿ ನಾನು ಹೆಲ್ಮೆಟ್ ಧರಿಸದ ಕಾರಣ ನನ್ನ ತಲೆಗೆ ಗಾಯಗಳು ಆಗಿದೆ ಎಂದರೆ ಸರಿಯಲ್ಲ.

13 ದಿನಗಳ ಕಾಲ ಒಳರೋಗಿಯಾಗಿ ನಾನು ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿದ್ದೆನು. ವೈದ್ಯರಾದ ಸಿದ್ದಾರ್ಥ , ಸ್ಕಂದ ಮೂರ್ತಿ ಹಾಗೂ ಇನ್ನೊಬ್ಬ ವೈದ್ಯರು ನನಗೆ ಚಿಕಿತ್ಸೆ ನೀಡಿದ್ದಾರೆ. ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ನನ್ನ ಹೆಗಲಿನ ಸರ್ಜರಿ ಆಗಿದೆ. ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿದಷ್ಟು ವೈದ್ಯಕೀಯ ಖರ್ಚು ನನಗೆ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಒಂದು ಲಕ್ಷ ರೂಪಾಯಿ ಸಂಪೂರ್ಣ ಸುರಕ್ಷಾ ಯೋಜನೆಯಡಿ ಆಸ್ಪತ್ರೆಯ ಖರ್ಚಿಗಾಗಿ ಸಂದಾಯ ಆಗಿದೆ. ನಿ.ಪಿ.14 ಡಿಸ್ಚಾರ್ಜ್ ಸಮ್ಮರಿ ಜೆರಾಕ್ಸ್ ಆಗಿದೆ ಎಂದರೆ ಸರಿ.ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ನನಗೆ ಆದ ಚಿಕಿತ್ಸೆಗೆ ಸಂಬಂಧಿಸಿದಂತೆ ಎಲ್ಲಾ ಖರ್ಚುಗಳು ಸಂದಾಯ ಆಗಿದೆ ಎಂದರೆ ಸರಿಯಲ್ಲ. ಸಂದಾಯ ಆದ ಬಿಲ್ಲುಗಳನ್ನು ಆಸ್ಪತ್ರೆಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.15 ರಲ್ಲಿ ನಮೂದಿಸಿರುವಂತಹ ಯಾವುದೇ ಶಾಶ್ವತ ಅಂಗಊನತ್ವ ಆಗಿಲ್ಲ ಎಂದರೆ ಸರಿಯಲ್ಲ. ವೈದ್ಯರ ಮೇಲೆ ಪ್ರಭಾವ ಬೀರಿ ನಿ.ಪಿ.15 ರ ದಾಖಲೆಯನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಂಪೂರ್ಣ

ಸುರಕ್ಷತಾ ಯೋಜನೆಯಡಿ ನನಗೆ ಹಣ ಪಾವತಿಯಾಗಿರುವ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಲು ನನಗೆ ಆಕ್ಷೇಪ ಇರಲಿಲ್ಲ.

ನಾನು ಶ್ರೀದೇವಿ ಎಂಟರ್ ಪ್ರೈಸಸ್ ನಲ್ಲಿ ಅಡಿಕೆಯನ್ನು ವಿಂಗಡಿಸುವ ಕೆಲಸ ಮಾಡುತ್ತೇನೆ. ಆ ಬಗ್ಗೆ ನನ್ನ ಹತ್ತಿರ ದಾಖಲಾತಿ ಇರುವುದಿಲ್ಲ. ನನಗೆ ಅಡಿಕೆ ವಿಂಗಡಿಸುವ ಕೆಲಸ ಇರಲಿಲ್ಲ ಮತ್ತು ಅದರಿಂದ ನನಗೆ 24,000/- ರೂ. ತಿಂಗಳ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ಪೂರ್ವ ಏನು ಕೆಲಸ ಮಾಡುತ್ತಿದ್ದೆನೋ ಅದನ್ನು ಈಗಲೂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೇತನ ದೃಢೀಕರಣ ಪತ್ರ ಸುಳ್ಳು ಆಗಿದೆ ಎಂದರೆ ಸರಿಯಲ್ಲ. ನಿ.ಪಿ.15 ರಲ್ಲಿ ಸೂಚಿಸಿರುವಂತೆ ನನಗೆ ಯಾವುದೇ ನೆನಪಿನ ಶಕ್ತಿ ಕುಂಟಿತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.